(ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೬೮(೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸುವುದು.

(ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೧(೧)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸುವುದು.

(ಈ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೨(೧)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕು ಭಾಧ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸುವುದು.

(ಉ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೭೭(೧)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

(ಊ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೨(೧)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರೀ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

(ಋ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೩(೧)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗೀ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸುವುದು.

(ಋೂ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೬ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡ ಜಾತಿಯವರು ಕಲ್ಯಾಣ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸುವುದು.

(ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೨೮೮ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಬತ್ತು ಜನ ಸದಸ್ಯರನ್ನು ಚುನಾಯಿಸುವುದು.

(ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ ೩೫೩(೨)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸುವುದು.

ಪ್ರಸ್ತಾವಗಳನ್ನು ಅಂಗೀಕರಿಸಲಾಯಿತು.

ಶ್ರೀ ರಮೇಶ್‌ಕುಮಾರ್.— ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ತಮ್ಮ ಕಛೇರಿಗೆ ನಾನು ಬಂದು ನಿಯಮ ೧೯೦ರ ಅನುಸಾರವಾಗಿ ಸಭಾಧ್ಯಕ್ಷರಾದ ತಮ್ಮ ಗೌರವಕ್ಕೆ ಚ್ಯುತಿ ಬಂದಿದೆಯೆಂದು ನೋಟೀಸ್ ಕೊಟ್ಟಿದ್ದೇನೆ. ದುರಾದೃಷ್ಟವಶಾತ್ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಸ್ಥಾನದಲ್ಲಿ ಇಲ್ಲ. ಅವರು ಇದ್ದಾಗ ಪ್ರಸ್ತಾಪ ಮಾಡತಕ್ಕಂಥಾದ್ದು ಸಾಂಜನ್ಯ. ತಾವು ಪ್ರಸ್ತಾಪ ಮಾಡಿ ಎಂದು ಅನುಮತಿ ಕೊಟ್ಟರೆ ಮಾಡುತ್ತೇನೆ.

ಅಧ್ಯಕ್ಷರು.— ಈಗ ವಿರೋಧ ಪಕ್ಷದ ನಾಯಕರು ಇಲ್ಲ ಅವರು ಬಂದ ಮೇಲೆ ಪ್ರಸ್ತಾಪ ಮಾಡಿ.

ಗಮನ ಸೆಳೆಯುವ ಸೂಚನೆ.

ನಂಜನಗೂಡಿನಲ್ಲಿರುವ ಬಾಲಕಿಯರ ವಸತಿ ಶಾಲಾಖೆಯಲ್ಲಿರತಕ್ಕ ನ್ಯೂನತೆಗಳ ಬಗ್ಗೆ

SRI D. T. JAYAKUMAR.— To call the attention of the Minister for Education to the hardship caused to student due to lack of essential facilities in SC/ST Girls residential High School at Nanjangud.